**1** ನೇ ಹೆಚ್ಚುವರಿ ವಿಶೇಷ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ಚಿಕ್ಕಮಗಳೂರು

ಸ್ಪೆಷಲ್ ಮೊಕದ್ದಮೆ ನಂಃ **40/2015**

| | | |
|---|---|---|
| ಸಾಕ್ಷಿದಾರರ ಹೆಸರು | - ಸೋಮಶೇಖರ್ | ಪಿಡಬ್ಲೂ - 03 |
| ತಂದೆಯ ಹೆಸರು | - ಗಿಡ್ಡಯ್ಯ | ಸಿಡಬ್ಲೂ - 04 |
| ವಯಸ್ಸು | - 40 ವರ್ಷ | |
| ಉದ್ಯೋಗ | - ಆಟೋ ಚಾಲಕ | |
| ವಾಸ ಸ್ಥಳ | - ಮರಬೈಲು | |

ದಿನಾಂಕಃ 29.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

*(ಈ ದಿನ 4 ಮತ್ತು 5 ನೇ ಆರೋಪಿತರು ನ್ಯಾಯಾಲಯಕ್ಕೆ ಗೈರು ಹಾಜರಿದ್ದು ಅವರ ಪರ ವಕೀಲರು ವಿನಾಯಿತಿ ಅರ್ಜಿ ಸಲ್ಲಿಸಿ ಸದರಿ ಆರೋಪಿತರನ್ನು ಗುರುತಿಸುವಿಕೆಯ ಬಗ್ಗೆ ಯಾವುದೇ ತಕರಾರು ಇಲ್ಲವೆಂದು ತಿಳಿಸಿರುತ್ತಾರೆ ಹಾಗಾಗಿ ಸದರಿ ಆರೋಪಿತರ ಗೈರು ಹಾಜರಿಯಲ್ಲಿ ಸಾಕ್ಷಿಯ ವಿಚಾರಣೆಯನ್ನು ನಡೆಸಲಾಯಿತು.)*

ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ-

1. ಈ ಪ್ರಕರಣದ ಎಲ್ಲಾ ಆರೋಪಿತರು ಗೊತ್ತು. ಫ್ರಾಸಾ.1, 2, ಚಾಸಾ.5 ಮತ್ತು 6 ಗೊತ್ತು. ನಾನು ಜನ್ನಾಪುರದಲ್ಲಿ ಆಟೋ ಚಾಲಕನಾಗಿ ಕೆಲಸ ಮಾಡಿಕೊಂಡಿದ್ದೇನೆ.

2. ಈಗ್ಗೆ ಸುಮಾರು 11 ವರ್ಷಗಳ ಹಿಂದೆ ಒಂದು ದಿನ ಬೆಳಿಗ್ಗೆ 10.30 ಗಂಟೆಗೆ ಫ್ರಾಸಾ.1 ರವರು ಜನ್ನಾಪುರದಿಂದ ಹಾರಮಕ್ಕಿಗೆ ಹೋಗಲು ನನ್ನ ಆಟೋವನ್ನು ಬಾಡಿಗೆಗೆ ಮಾತನಾಡಿದರು. ಅದಕ್ಕೆ ನಾನು ಒಪ್ಪಿ ಅವರನ್ನು ನನ್ನ ಆಟೋದಲ್ಲಿ ಕರೆದುಕೊಂಡು

ಫ್ರಾಸಾ.1 ರವರ ಮನೆಯ ಹತ್ತಿರ ಇರುವ ರಸ್ತೆಯಲ್ಲಿ ಆಟೋವನ್ನು ನಿಲ್ಲಿಸಿದೆನು. ಅಲ್ಲಿಂದ ಸ್ವಲ್ಪ ದೂರದಲ್ಲಿ ಮೇಲ್ಭಾಗದಲ್ಲಿ ಹೆಂಗಸಿನ ಕೂಗಾಟದ ಶಬ್ಧ ಕೇಳಿಸಿತು. ಆಗ ನಾನು ಮತ್ತು ಫ್ರಾಸಾ.1 ರವರು ಅಲ್ಲಿಗೆ ಓಡಿ ಹೋಗಿ ನೋಡಿದಾಗ 1 ಮತ್ತು 2 ನೇ ಅರೋಪಿತರು ಫ್ರಾಸಾ.1 ರವರ ಚಿಕ್ಕಮ್ಮನಾದ ಚಾಸಾ.5 ಇಂದಿರಾವರನ್ನು ಎಳೆದುಕೊಂಡು ಹೋಗುತ್ತಿದ್ದರು. ಫ್ರಾಸಾ.1 ಮತ್ತು 2 ರವರು 1 ಮತ್ತು 2 ನೇ ಆರೋಪಿತರನ್ನು ಬಿಡಿ ಎಂದು ಕೂಗಿಕೊಂಡು ಹೋದಾಗ 1 ನೇ ಆರೋಪಿ ಒಂದು ಕಲ್ಲಿನಿಂದ ಫ್ರಾಸಾ.2 ರವರಿಗೆ ಹೊಡೆದನು. 2 ನೇ ಆರೋಪಿ ಫ್ರಾಸಾ.1 ರವರನ್ನು ಓಡಿಸಿಕೊಂಡು ಹೋಗಿ ಬೈದನು. ಆಗ ಫ್ರಾಸಾ.1 ರವರು ನಾನು ಆಟೋ ನಿಲ್ಲಿಸಿದ್ದ ಕಡೆ ಹೋಗಿ ಗಿಡದ ಮರೆಯಲ್ಲಿ ಬಚ್ಚಿಟ್ಟುಕೊಂಡಿದ್ದರು. ಫ್ರಾಸಾ.2 ರವರಿಗೆ ಹಲ್ಲೆ ಮಾಡುವುದನ್ನು ತಡೆಯಲು ಫ್ರಾಸಾ.1 ರವರ ತಂದೆಯಾದ ಚಾಸಾ.6 ರವರು ಹೋದಾಗ 1 ಮತ್ತು 2 ನೇ ಆರೋಪಿತರು ಚಾಸಾ.6 ರವರ ತಲೆಗೆ ದೊಣ್ಣೆಯಿಂದ ಹೊಡೆದರು. ನಂತರ 1 ಮತ್ತು 3 ನೇ ಆರೋಪಿತರು ಫ್ರಾಸಾ.1 ರವರು ಬಚ್ಚಿಟ್ಟುಕೊಂಡಿದ್ದ ಸ್ಥಳಕ್ಕೆ ಹೋಗಿ ಫ್ರಾಸಾ.1 ರವರನ್ನು ಕುರಿತು ಕೆಟ್ಟದಾಗಿ ಬೈದರು. 1 ನೇ ಆರೋಪಿ ಫ್ರಾಸಾ.1 ರವರಿಗೆ ದೊಣ್ಣೆಯಿಂದ ಹೊಡೆದನು, ಆಗ ಫ್ರಾಸಾ.1 ರವರು ಅಲ್ಲಿಂದ ಓಡಿ ಹೋದರು. ನಂತರ ನಾನು ಆಟೋದ ಬಳಿ ಹೋದೆನು.

3. ನಂತರ ಫ್ರಾಸಾ.1 ರವರು ಆರೋಪಿತರ ವಿರುದ್ಧ ಗೋಣಿಬೀಡು ಪೊಲೀಸರಿಗೆ ದೂರನ್ನು ಕೊಟ್ಟ ವಿಚಾರ ತಿಳಿಯಿತು. ನಂತರ

ಸದರಿ ಪೊಲೀಸರು ನನ್ನನ್ನು ವಿಚಾರಿಸಿದರು, ಆಗ ನಾನು ಅವರಿಗೆ ಮೇಲಿನ ವಿಚಾರಗಳನ್ನು ತಿಳಿಸಿ ಹೇಳಿಕೆಯನ್ನು ನೀಡಿದೆನು.

ಪಾಟೀ ಸವಾಲು:

**(ದಿಃ 02-03-2024** ರ ಆದೇಶದಂತೆ ಚಾಸಾ.**6** ರವರ ಮುಖ್ಯ ವಿಚಾರಣೆಯಾಗುವವರೆಗೆ ಪ್ರಸ್ತುತ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು.**)**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ